ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.ಃ 1536/2022

.....................................................................

CW 01
PW 01

| | | |
|---|---|---|
| ಹೆಸರು | ಃ | ಲಕ್ಷ್ಮಣ ಕಿತ್ತೂರಕರ |
| ತಂದೆಯ ಹೆಸರು | ಃ | ಕೇದಾರಿ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸಸ್ಥಳ | ಃ | ಬಿದ್ರೋಳ್ಳಿ, ತಾಃ ಹಳಿಯಾಳ ಪಟ್ಟಣ. |

ದಿನಾಂಕ 07-02-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 2, 3, ಚಾಸಾ 6 ರಿಂದ 10 ರವರು ಪರಿಚಯ ಇದ್ದಾರೆ. ಉಳಿದವರು ಪರಿಚಯ ಇಲ್ಲ.

ಸುಮಾರು 5 ವರ್ಷಗಳ ಹಿಂದೆ ನಾವು ಬಿದ್ರೋಳ್ಳಿ ಯಿಂದ ಹಳಿಯಾಳಕ್ಕೆ ಬಂದು ಆನಂದ್ ಸಾಗರ ಹೊಟೇಲ್ ಹತ್ತಿರ ನಮ್ಮ ಮೋಟಾರ ಸೈಕಲ್ ನಿಲ್ಲಿಸಿ ಮಾರುಕಟ್ಟೆಗೆ ಹೋಗಿ ಸಂತೆ ಮಾಡಿಕೊಂಡು ಬರುವಷ್ಟರಲ್ಲಿ ಮೋಟಾರ ಸೈಕಲ್ ಇರಲಿಲ್ಲ. ಆಗ ನಾನು ಅಕ್ಕ ಪಕ್ಕ ಜನರನ್ನು ವಿಚಾರಿಸಿದೆ, 3-4 ದಿನ ಬಿಟ್ಟು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಗುರುತಿಸಿದ ಮೇರೆಗೆ ದೂರನ್ನು **ನಿಪಿ 1 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 1 ಎ ಎಂದು** ಗುರುತಿಸಲಾಯಿತು. ಆ ನನ್ನ ವಾಹನ ಹಿರೋ ಹೊಂಡಾ ಕಂಪನಿಯ ಕಪ್ಪು ಬಣ್ಣ ಸ್ಲೆಂಡರ್ ಪ್ಲಸ್ ಆಗಿತ್ತು ಅದರ ಸಂಖ್ಯೆ ಕೆಎ-31-ಎಲ್-9490 ಆಗಿತ್ತು.

ನಾನು ಪೊಲೀಸರಿಗೆ ವಾಹನ ಕಳ್ಳತನವಾದ ಜಾಗವನ್ನು ತೋರಿಸಿರುತ್ತೇನೆ. ಆಗ ಚಾಸಾ 2 ಮತ್ತು 3 ರವರು ಮತ್ತು ಪೊಲೀಸರು ಹಾಜರಿದ್ದರು. ಆ ಸಮಯದಲ್ಲಿ ಪೊಲೀಸರು ಪಂಚನಾಮೆ ಮಾಡಿ, ಭಾವಚಿತ್ರವನ್ನು ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗ ಗುರುತಿಸಿದ್ದು ಅದನ್ನು **ನಿಪಿ 2 ಎಂದು**, ಸಾಕ್ಷಿಯ ಸಹಿಯನ್ನು **ನಿಪಿ 2ಎ ಎಂದು**

ಗುರುತಿಸಲಾಯಿತು. ಭಾವಚಿತ್ರವನ್ನು **ನಿಪಿ 3 ಎಂದು** ಗುರುತಿಸಲಾಯಿತು. ನಂತರ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿತರನ್ನು ಈ ಮೊದಲು ನೋಡಿಲ್ಲ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 14-11-2022 ರಂದು ಪೊಲೀಸರಿಗೆ ದೂರು ನೀಡುವಾಗ ದಿನಾಂಕ 02-11-2021 ರಂದು ಸಂಜೆ 07-00 ಗಂಟೆಗೆ ನಿಮ್ಮ ಮೋಟಾರ ಸೈಕಲ್ ಕಳ್ಳತನ ಆಯಿತು ಎಂದು ಬರೆಯಿಸಿರುತ್ತೀರಿ ಎಂದರೆ ಸರಿ. ಅದೇ ದಿನ ಪೊಲೀಸರು ಬೆಳಗ್ಗೆ 11-45 ರಿಂದ 12-45 ರ ವರೆಗೆ ಪಂಚನಾಮೆ ಜರುಗಿಸಿದರು ಎಂದರೆ ಸರಿ.

ದಿನಾಂಕ 28-07-2022 ರಂದು ಪೊಲೀಸರು ಮರುಹೇಳಿಕೆ ನೀಡಿ ಅದರಲ್ಲಿ ದಿನಾಂಕ 14-11-2021 ರಂದು -------------------- ಅಳವಡಿಸಿಕೊಳ್ಳಲು ವಿನಂತಿ ಎಂದು ಮರುಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ.ಸಾಕ್ಷಿ ಅಲ್ಲಗಳೆದ ಮೇರೆಗೆ ಅವರ ಮರುಹೇಳಿಕೆಯನ್ನು **ನಿಪಿ 4 ಎಂದು** ಗುರುತಿಸಲಾಯಿತು.

ದಿನಾಂಕ 28-07-2022 ರಂದು ಪೊಲೀಸರು ಮರುಹೇಳಿಕೆ ನೀಡಿ ಅದರಲ್ಲಿ ಈ ದಿವಸ ತಾವು ಕರೆದು -------------------- ಅಳವಡಿಸಿಕೊಳ್ಳಲು ವಿನಂತಿ ಎಂದು ಮರುಹೇಳಿಕೆ ನೀಡಿರುತ್ತೀರಿ ಎಂದರೆ ಸರಿಯಲ್ಲ.ಸಾಕ್ಷಿ ಅಲ್ಲಗಳೆದ ಮೇರೆಗೆ ಅವರ ಮರುಹೇಳಿಕೆಯನ್ನು **ನಿಪಿ 5 ಎಂದು** ಗುರುತಿಸಲಾಯಿತು. ನೀವೆ ದೂರು ನೀಡಿದ ನಂತರ ಪೊಲೀಸರಿಗೆ ನಿಪಿ 4 ಮತ್ತು 5 ರಂತೆ ಮರುಹೇಳಿಕೆ ನೀಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** 1, 2 ಮತ್ತು 4 ಆರೋಪಿತರ ಪರ ವಕೀರಿಂದ.

ಪಂಚನಾಮೆಯಲ್ಲಿ ಪೊಲೀಸರು ಏನು ಬರೆದುಕೊಂಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

**ಪಾಟೀ ಸವಾಲುಃ** 3 ನೇ ಆರೋಪಿಯ ವಕೀಲರು ಗೈರು ಹಾಜರಿದ್ದು ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.